ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 116-120
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಿತ್ರದುರ್ಗ ನಾಯಕ ಅರಸರ ಕಾಲದ ಶಾಸನೋಕ್ತ ಅಗ್ರಹಾರಗಳು ಮತ್ತು ಅವನತಿ

**ಡಾ. ಓಬಣ್ಣ ಪಿ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀಮತಿ ಕೋಟೆ ಬೋರಮ್ಮ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

**Abstract:**

*ಚಿತ್ರದುರ್ಗ ನಾಯಕ ಅರಸರ ಆಳ್ವಿಕೆಯಲ್ಲಿ ಅಗ್ರಹಾರಗಳು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಜೀವನದ ಪ್ರಮುಖ ಕೇಂದ್ರಗಳಾಗಿ ಬೆಳವಣಿಗೆಯಾದವು. ಶಾಸನಗಳಲ್ಲಿ ದಾಖಲಾದ ಮಾಹಿತಿಯ ಆಧಾರದ ಮೇಲೆ ಅಗ್ರಹಾರಗಳ ಸ್ಥಾಪನೆ, ಭೂದಾನ, ಬ್ರಾಹ್ಮಣರ ಪಾತ್ರ ಮತ್ತು ಆಡಳಿತಾತ್ಮಕ ಮಹತ್ವವನ್ನು ಈ ಅಧ್ಯಯನವು ವಿಶ್ಲೇಷಿಸುತ್ತದೆ. ನಾಯಕ ಅರಸರು ವೇದಾಧ್ಯಯನ, ದೇವಾಲಯ ನಿರ್ವಹಣೆ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಅಗ್ರಹಾರಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದರು. ನಂತರದ ರಾಜಕೀಯ ಅಸ್ಥಿರತೆ, ಆರ್ಥಿಕ ಬದಲಾವಣೆಗಳು ಮತ್ತು ಆಡಳಿತಾತ್ಮಕ ಪರಿವರ್ತನೆಗಳಿಂದ ಅನೇಕ ಅಗ್ರಹಾರಗಳು ಅವನತಿಯ ಹಾದಿಯನ್ನು ಹಿಡಿದವು. ಶಾಸನೋಕ್ತ ಮಾಹಿತಿಯ ಮೂಲಕ ಅಗ್ರಹಾರಗಳ ಉಗಮ, ವಿಕಾಸ ಹಾಗೂ ಅವನತಿಯ ಐತಿಹಾಸಿಕ ಹಿನ್ನೆಲೆಯನ್ನು ಈ ಲೇಖನವು ಸಮಗ್ರವಾಗಿ ಪರಿಶೀಲಿಸುತ್ತದೆ. ಚಿತ್ರದುರ್ಗ ಪ್ರದೇಶದ ಸಾಂಸ್ಕೃತಿಕ ಮತ್ತು ಆಡಳಿತ ಇತಿಹಾಸವನ್ನು ಪುನರ್ನಿರ್ಮಿಸಲು ಈ ಅಧ್ಯಯನವು ಮಹತ್ವದ ಕೊಡುಗೆಯನ್ನು ನೀಡುತ್ತದೆ.*

**Keywords:** *ಚಿತ್ರದುರ್ಗ ನಾಯಕ ಅರಸರು, ಶಾಸನೋಕ್ತ ಅಗ್ರಹಾರಗಳು, ಭೂದಾನ ವ್ಯವಸ್ಥೆ, ಅಗ್ರಹಾರಗಳ ಅವನತಿ, ಕರ್ನಾಟಕ ಇತಿಹಾಸ*

## ಪೀಠಿಕೆ

ಮಾನವ ಅಪರಿಚಿತ ಪ್ರಪಂಚಕ್ಕೆ ಚಿರಪರಿಚಿತನಾಗಲು ಇರುವ ಒಂದೇ ಒಂದು ಸಾಧನವೆಂದರೆ ಶಿಕ್ಷಣ. ಮನುಷ್ಯನಿಗೆ ಸಮಾಜದಲ್ಲಿ ವಿಕಸನ, ಬೌದ್ಧಿಕತೆ, ಸಂಸ್ಕೃತಿ, ನಾಗರಿಕತೆ ಬೆಳೆಸುವುದು ಶಿಕ್ಷಣವಾಗಿರುತ್ತದೆ. ಆದ್ದರಿಂದ ಶಿಕ್ಷಣ ಮಾನವನ ಬದುಕಿನಲ್ಲಿ ಅತ್ಯಂತ ಅವಶ್ಯಕ. ಉತ್ತಮ ಸಮಾಜ ನಿರ್ಮಿಸುವುದು ಶೈಕ್ಷಣಿಕ ಕೇಂದ್ರಗಳ ಆದ್ಯ ಕರ್ತವ್ಯವಾಗಿತ್ತು. ಪ್ರಾಚೀನ ಭಾರತದಲ್ಲಿ ಶಿಕ್ಷಣವನ್ನು ಗುರುಕುಲ, ಮಠ, ದೇವಾಲಯ, ಅಗ್ರಹಾರ, ಬ್ರಹ್ಮಪುರಿ ಬಸದಿ ವಿಹಾರ ಕೇಂದ್ರಗಳಲ್ಲಿ ನೀಡಲಾಗುತ್ತಿತ್ತು ಒಂದು ರೀತಿ ಶಿಕ್ಷಣ ನೀತಿ ಧಾರ್ಮಿಕ ವ್ಯವಸ್ಥೆ ಸ್ವರೂಪದಲ್ಲಿತ್ತು. ವೈದಿಕ ಕಾಲದಲ್ಲಿ ಶಿಕ್ಷಣ ಬ್ರಾಹ್ಮಣರ ಸ್ವತಾಗಿದ್ದು ಸಾರ್ವತ್ರಿಕವಾಗಿರಲಿಲ್ಲ ಏಕೆಂದರೆ ಶಿಕ್ಷಣ ಕೇಂದ್ರಗಳ ಮೇಲೆ ಯಜಮಾನಿಕೆಯನ್ನು ಸ್ಥಾಪಿಸಿದರು. ಜನಸಾಮಾನ್ಯರು ಶಿಕ್ಷಣದಿಂದ ವಂಚಿತರಾಗಿರುವುದು ಗಮನಾರ್ಹವಾದ ಸಂಗತಿ.

ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಾಗಿ 'ಅಗ್ರಹಾರ'ಗಳು ತಮ್ಮದೇ ಅಸ್ತಿತ್ವವನ್ನು ಉಳಿಸಿಕೊಂಡಿತ್ತು. ಅಗ್ರಹಾರವನ್ನು ಸಾಮಾನ್ಯವಾಗಿ ಬ್ರಾಹ್ಮಣರು ವಾಸ ಮಾಡುವ ನೆಲೆ ಎಂದು

**Please cite this article as:** ಓಬಣ್ಣ, ಪಿ. (2026). ಚಿತ್ರದುರ್ಗ ನಾಯಕ ಅರಸರ ಕಾಲದ ಶಾಸನೋಕ್ತ ಅಗ್ರಹಾರಗಳು ಮತ್ತು ಅವನತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 116–120

ಅರ್ಥೈಸಬಹುದು. ಅಗ್ರ ಎಂದರೆ ಮೊದಲನೆಯದು, ಹಾರ ಎಂದರೆ ತೆಗೆದುಕೊಳ್ಳುವುದು ಎಂದು ಆಗುತ್ತದೆ.[1] ಬ್ರಾಹ್ಮಣರಿಗೆ ದಾನವಾಗಿ ಕೊಡಲಾದ ಗ್ರಾಮದ ಭಾಗ ಅದರ ಸಕಲ ಸೌಕರ್ಯವು ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಸೇರಿರುತಿತ್ತು ಜೊತೆಗೆ ಇತರ ಜಾತಿಯವರು ಇರುತ್ತಿದ್ದರೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅಗ್ರಹಾರಗಳಲ್ಲಿ ವಾಸ ಮಾಡುವ ಜನಗಳಿಗೆ ಮಹಾಜನಗಳೆಂದು ಹೆಸರು. ಇವರೆಲ್ಲರೂ ಅಗ್ರಹಾರದ ಆಡಳಿತ ವಿಷಯ ನೋಡಿಕೊಳ್ಳುತ್ತಿದ್ದರು ಅಗ್ರಹಾರಗಳ ಅಸ್ತಿತ್ವದ ವಿವರಣೆಯನ್ನು ಕ್ರಿ.ಶ 3ನೇ ಶತಮಾನದ ಸಂಗಮ ಕೃತಿಯಲ್ಲಿ ಪೆರುಂಪಾಣಂಪೆಟ್ಟುಪ್ಪೈ ಎಂಬಲ್ಲಿ ಕಂಡುಬರುತ್ತದೆ.[2] ಕರ್ನಾಟಕದಲ್ಲಿ ಅಗ್ರಹಾರಗಳು ಕ್ರಿ.ಶ. 5ನೇ ಶತಮಾನದಿಂದ 19ನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದವು. ಇಂದಿಗೂ ದಕ್ಷಿಣ ಕರ್ನಾಟಕದಲ್ಲಿ ಅಗ್ರಹಾರ ಎಂಬ ಹೆಸರಿನ ಹಲವಾರು ಸ್ಥಳಗಳಿವೆ ಈ ಸ್ಥಳಗಳು ಬಹುಶಃ ಬ್ರಾಹ್ಮಣರ ಗ್ರಾಮಗಳಾಗಿ ಹುಟ್ಟಿಕೊಂಡಿರಬಹುದು.

ಅಗ್ರಹಾರಗಳು ಮಧ್ಯಕಾಲೀನ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿವೆ ಗುರುಕುಲದಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಮನೆಗೆ ಹಿಂತಿರುಗಿ ಬಂದ ಬ್ರಾಹ್ಮಣರು ಗೃಹಸ್ಥರಾಗಿ ನೆಲೆ ಗೊಳ್ಳುವ ಸಂದರ್ಭದಲ್ಲಿ ಈ ರೀತಿಯ ಅಗ್ರಹಾರಗಳನ್ನು ನಿರ್ಮಿಸಲಾಗುತ್ತಿತ್ತು ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ದತ್ತಿಗಳನ್ನು ಬಿಡುವುದು ರಾಜನ ಧಾರ್ಮಿಕ ಕೆಲಸಗಳಲ್ಲಿ ಒಂದಾಗಿತ್ತು ಅದೊಂದು ಪುಣ್ಯ ಸಂಪಾದನೆಯ ಮಾರ್ಗವು ಆಗಿತ್ತು ಎಂದು ರಾಜನು ಭಾವಿಸಿದ್ದಿರಬೇಕು. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಗ್ರಹಾರಗಳನ್ನು ನಿರ್ಮಿಸಿ ಅಲ್ಲಿನ ನಿವಾಸಿಗಳಿಗೆ ಜೀವನ ನಿರ್ವಹಣೆಗೆ ದತ್ತಿಯನ್ನು ಬಿಟ್ಟು ಸಕಲ ಸೌಲಭ್ಯ ಕಲ್ಪಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ನಾಯಕ ಅರಸರ ಕಾಲದ ಶಾಸನೋಕ್ತ ಅಗ್ರಹಾರಗಳು ಮತ್ತು ಅವನತಿ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಈಗಾಗಲೇ ಅಗ್ರಹಾರಗಳ ಕುರಿತು ಬಿ.ಎಲ್.ರೈಸ್ ಎಪಿಗ್ರಾಫಿಕಾ ಕರ್ನಾಟಿಕಾ ಸಂ.11 ರಲ್ಲಿ ಉಲ್ಲೇಖಿಸಿದ್ದಾರೆ. ಸುರೇಶ ಬಿ ಅವರು ಚಿತ್ರದುರ್ಗ ಜಿಲ್ಲೆಯ ಶಾಸನೋಕ್ತ ಅಗ್ರಹಾರಗಳು ಎಂಬ ಲೇಖನವನ್ನು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನ ಸಂ.17ರಲ್ಲಿ ಪ್ರಕಟಿಸಿದ್ದಾರೆ. ಇವರು ಪಾಳೆಯಗಾರರ ಕಾಲದ ನಾಲ್ಕು ಅಗ್ರಹಾರಗಳನ್ನು ಮಾತ್ರ ಗುರುತಿಸಿದ್ದಾರೆ. ನನ್ನ ಲೇಖನದಲ್ಲಿ ಚಿತ್ರದುರ್ಗ ನಾಯಕ ಅರಸರ ಕಾಲಘಟ್ಟದ ಒಟ್ಟು ಹತ್ತು ಅಗ್ರಹಾರಗಳನ್ನು ಗುರುತಿಸಿಕೊಂಡು ಅಗ್ರಹಾರಗಳ ಪತನ ಕುರಿತು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

**ಕಡಲೆ ಗುದ್ದು (ಚಿತ್ರದುರ್ಗ ತಾಲೂಕು)**

ಚಿತ್ರದುರ್ಗ ತಾಲೂಕಿನ ಹಿರೇಗುಂಟನೂರು ಹೋಬಳಿಯ ಕ್ಯಾಸಪುರದ ಶಾನುಭೋಗ ರಾಮಣ್ಣನವರ ಬಳಿ ದೊರೆತ ಕ್ರಿ.ಶ. 1652ರ ತಾಮ್ರಶಾಸನವು ವಿಜಯನಗರ ಸಾಮ್ರಾಜ್ಯದ ಅರಸನಾದ ಶ್ರೀರಂಗರಾಯನ ಕಾಲಕ್ಕೆ ಸೇರಿದೆ[3]. ಈ ಶಾಸನದಲ್ಲಿ ಶ್ರೀರಂಗರಾಯನ ಕಾರ್ಯಕರ್ತನಾಗಿದ್ದ ಕಸ್ತೂರಿ ರಂಗಪ್ಪ ನಾಯಕನ ಪುತ್ರನಾದ ಇಮ್ಮಡಿ ಮದಕರಿ ನಾಯಕನು, ಭಟ್ಟರ ಬಾಗೂರ ಭಟ್ಟರ ಪುತ್ರ ಪುಟ್ಟಣ್ಣನ ಮಗನಾದ ತಿಮ್ಮಪ್ಪನಿಗೆ ಮನಃಪ್ರೀತಿಯಿಂದ ಚಿತ್ರಹಳ್ಳಿ ಸೀಮೆಯ ಹಿರೇಗುಂಟನೂರು ಮಾಗಾಣಿಗೆ ಸೇರಿದ ಕಡಲೆಗುದ್ದು ಗ್ರಾಮವನ್ನು ಅಗ್ರಹಾರವಾಗಿ ದಾನವಾಗಿ ನೀಡಿದ ವಿವರಗಳು ದಾಖಲಾಗಿವೆ. ಅಲ್ಲದೆ, ಆ ಗ್ರಾಮದಿಂದ ಬರುವ ಎಲ್ಲ ವಿಧದ ಆದಾಯಗಳ ಮೇಲಿನ ಹಕ್ಕು ತಿಮ್ಮಪ್ಪನಿಗೇ ಸೇರಬೇಕೆಂದು ಇಮ್ಮಡಿ ಮದಕರಿ ನಾಯಕನು ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಈ ದಾನದ ನೆನಪಿಗಾಗಿ ತಾಮ್ರಶಾಸನದ ಜೊತೆಗೆ ಶಿಲಾಶಾಸನವನ್ನೂ ಸ್ಥಾಪಿಸಿರುವುದು, ಆ ಅಗ್ರಹಾರದ ಮಹತ್ವ ಮತ್ತು ಶಾಶ್ವತತೆಯನ್ನು ಪ್ರತಿಬಿಂಬಿಸುತ್ತದೆ.

**ಆನೇಸಿದ್ರಿ (ಹಿರಿಯೂರು ತಾಲೂಕು)**

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕಿನ ಕ್ರಿ.ಶ.1687ರ ಆನೇಸಿದ್ರಿ ಶಿಲಾಶಾಸನವು ವಿಜಯನಗರ ಅರಸ ಕೃಷ್ಣದೇವರಾಯರು ಪಾಲಿಸಿದಂತಹ ಆನೇಸಿದ್ರಿ ಅಗ್ರಹಾರವನ್ನು ಮಹಾ ನಾಯಕಚಾರ್ಯ ಕಾಮಗೇತಿ ಕಸ್ತೂರಿ ಮದಕರಿನಾಯಕರು ಜೀರ್ಣೋದ್ಧಾರ ಮಾಡಿಸಿ ಶಿಲಾಸ್ಥಾಪನೆ ಮಾಡಿಸಿದ್ದನ್ನು ದಾಖಲಿಸಲಾಗಿದೆ.[4] ಕಾಮಗೇತಿ ಕಸ್ತೂರಿ ಭರಮಣ್ಣ ನಾಯಕರ ಅಪ್ಪಣೆ ಮೇರೆಗೆ ಕುಮಾರ ಚಿಕ್ಕಣ್ಣನವರು ಬಂದು ಕವಿಕೋನಪ್ಪ ಅಗ್ರಹಾರದ ಆನೇಸಿದ್ರಿ ಪ್ರದೇಶವನ್ನು ಗುರುತು ಮಾಡಿದ ವಿವರಗಳು ಕಂಡುಬರುತ್ತದೆ.[5] ಈಗಾಗಲೇ ಆನೇಸಿದ್ರಿ ಅಗ್ರಹಾರವಾಗಿದ್ದರೂ ಕವಿ ಕೋನಪ್ಪ ಅಗ್ರಹಾರವೆಂದು ನಾಮಕರಣ ಮಾಡಿ ದಾನ ಕೊಟ್ಟಿರುವುದನ್ನು ಕಂಡು ಕೊಳ್ಳಬಹುದು.

**ದೇಮಚಯವನದುರ್ಗ (ಚನ್ನಗಿರಿ ತಾಲೂಕು)**

ಚನ್ನಗಿರಿ ತಾಲೂಕು ಮೊರಡಿ ಗ್ರಾಮದ ಕ್ರಿ.ಶ.1689ರ ಶಿಲಾಶಾಸನದಲ್ಲಿ ಭರಮಣ್ಣ ನಾಯಕರು ತಮ್ಮ ಗುರು ಹಿರಿಯರಿಗೆ ಪುಣ್ಯವಾಗಲೆಂದು ಅಪಸ್ತಂಬ ಸೂತ್ರದ ಭಾರದ್ವಾಜ ಗೋತ್ರದ ಅರುವೇಲಿ ಹರಿಭಟ್ಟರ ಪುತ್ರನಾದ ವೆಂಗಂಭಟ್ಟರ ಪುತ್ರನಿಗೆ ಸಂತೆಬೆನ್ನೂರು ಸೀಮೆಯ ದೇಮಚಯವನದುರ್ಗವೆಂಬ ಗ್ರಾಮದ ಅಗ್ರಹಾರವನ್ನು ಮಹಾ ವೈಶಾಖ ಶುದ್ಧ ಪೌರ್ಣಮಿ ಪುಣ್ಯಕಾಲದಲ್ಲಿ ಶಿವಾರ್ಪಿತವಾಗಿ ದಾನ ನೀಡಿದ ವಿವರಗಳನ್ನು ನೀಡಲಾಗಿದೆ.[6]

**ಗಂಡಮುಕ್ತೇನಹಳ್ಳಿ (ದಾವಣಗೆರೆ ತಾಲೂಕು)**

ದಾವಣಗೆರೆ ತಾಲೂಕಿನ ಕ್ರಿ.ಶ.1711ರ ಗಂಡೆಮುಕ್ತೇನಹಳ್ಳಿಯ ಶಿಲಾಶಾಸನದಲ್ಲಿ ಕಾಮಗೇತಿ ಮದಕರಿ ನಾಯಕರ ಪುತ್ರರಾದ ಭರಮಣ್ಣನಾಯಕರು ತಮ್ಮ ಹಿರಿಯರಿಗೆ ಪುಣ್ಯವಾಗಬೇಕೆಂದು ಅಶ್ವಲಾಯನ ಸೂತ್ರದ ಭಾರದ್ವಜ ಗೋತ್ರದ ನಾರಾಯಣಪ್ಪನ ಪುತ್ರನಾದ ಲಕ್ಷ್ಮಿಪತಿಯ ಪುತ್ರನಾದ ಬೊಕ್ಕಶ ನಾರಾಯಣಸ್ವಾಮಿಗೆ ಗಂಡೇಮುಕ್ತೇನಹಳ್ಳಿ ಎಂಬ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ನೀಡಿದ ದಾನದ ಉಲ್ಲೇಖವಿದೆ.[7]

**ಕಲ್ಲೇನಹಳ್ಳಿ (ಜಗಳೂರು ತಾಲೂಕು)**

ಜಗಳೂರು ತಾಲೂಕಿನ ಕ್ರಿ.ಶ.1715ರ ಕಲ್ಲೇನಹಳ್ಳಿ ಶಿಲಾಶಾಸನದಲ್ಲಿ ವಾಲ್ಮೀಕಿ ಗೋತ್ರದ ಶ್ರೀಮನ್ ಮಹಾ ನಾಯಕಚಾರ್ಯ ಕಾಮಗೇತಿ ಮದಕರಿ ನಾಯಕರ ಪುತ್ರರಾದ ಭರಮಣ್ಣ ನಾಯಕರು ತಮ್ಮ ಹಿರಿಯರಿಗೆ ಪುಣ್ಯವಾಗಲೆಂದು ಅಸಗೋಡು ಸ್ಥಳದ ಶಾನುಭೋಗರು ಅಚಪ್ಪನ ಪುತ್ರರಾದ ಉಗ್ರಾಣದ ರಂಗಪ್ಪನಿಗೆ ಬಿಳಿಚೋಡು ಸೀಮೆಯ ಕಲ್ಲೇನಹಳ್ಳಿ ಗ್ರಾಮದ ಅಗ್ರಹಾರವನ್ನು ಪೌರ್ಣಮಿಯ ಕಾಲದಲ್ಲಿ ದಾನವಾಗಿ ನೀಡಿದ ದಾಖಲೆ ಇದೆ.[8]

**ಹಳುವಧಾರ (ಚಿತ್ರದುರ್ಗ ತಾಲೂಕು)**

ಚಿತ್ರದುರ್ಗ ತಾಲೂಕಿನ ಕ್ರಿ.ಶ. 1718ರ ಹಳುವಧಾರ ಶಿಲಾಶಾಸನದ ಪ್ರಕಾರ, ಕಾಮಗೇತಿ ಮದಕರಿ ನಾಯಕನ ಪುತ್ರನಾದ ಭರಮಣ್ಣ ನಾಯಕನು ತನ್ನ ಕೀರ್ತಿ ಮತ್ತು ಸುಕೃತಕ್ಕಾಗಿ ಬಗ್ಗೂರ ಭಟ್ಟರ ಪುಟ್ಟಣ್ಣಪ್ಪನ ಪುತ್ರನಾದ ಭಟ್ಟರ ತಿಮ್ಮಪ್ಪನಿಗೆ ದುರ್ಗ ಸೀಮೆಯ ಹಳುವಧಾರ ಗ್ರಾಮವನ್ನು ಅಗ್ರಹಾರವಾಗಿ ದಾನವಾಗಿ ನೀಡಿದ್ದಾನೆ. ಈ ದಾನದ ಕುರಿತು ಶಾಸನದಲ್ಲಿ ಅಧಿಕೃತ ದಾನಪತ್ರದ ರೂಪದಲ್ಲಿ ದಾಖಲಿಸಲಾಗಿದ್ದು, ಅಗ್ರಹಾರದ ಹಕ್ಕುಗಳು ಮತ್ತು ದಾನದ ಉದ್ದೇಶವನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಶಾಸನವು ಚಿತ್ರದುರ್ಗ ನಾಯಕ ಅರಸರ ಕಾಲದಲ್ಲಿ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ದಾನವಾಗಿ ನೀಡುವ ಸಂಪ್ರದಾಯವು ಮುಂದುವರಿದಿದ್ದನ್ನು ಹಾಗೂ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅವರು ನೀಡಿದ ಪ್ರೋತ್ಸಾಹವನ್ನು ಪ್ರತಿಬಿಂಬಿಸುವ ಪ್ರಮುಖ ಐತಿಹಾಸಿಕ ದಾಖಲೆಯಾಗಿದೆ.[9]

**ಚಿಕ್ಕಬೂದಿಹಾಳು (ದಾವಣಗೆರೆ ತಾಲೂಕು)**

ದಾವಣಗೆರೆ ತಾಲೂಕಿನ ಕ್ರಿ.ಶ. 1719ರ ಬೂದಿಹಾಳು ಶಿಲಾ ಶಾಸನದಲ್ಲಿ ವಾಲ್ಮೀಕಿ ಗೋತ್ರದ ಕಾಮಗೇತಿ ಭರಮಣ್ಣ ನಾಯಕರು ತಮ್ಮ ಹಿರಿಯರಿಗೆ ಪುಣ್ಯ ಸುಕೃತವಾಗಲೆಂದು ಬೇತೂರು ಸೀಮೆಯ ಚಿಕ್ಕ ಬೂದಿಹಾಳ ಗ್ರಾಮದ ಅಗ್ರಹಾರವನ್ನು ಅಶ್ವಲಾಯನ ಸೂತ್ರದ ವಿಶ್ವಾಮಿತ್ರ ಗೋತ್ರದ ಬೆಳಗಾವಿ ರಾಮನಾಯಕರ ಪೌತ್ರ ಸೂರಪ್ಪನಾಯಕರ ಪುತ್ರ ರಾಮಣ್ಣನಾಯಕರಿಗೆ ಪೌರ್ಣಮಿ ಪುಣ್ಯಕಾಲದಲ್ಲಿ ಸಹಿರೋಣ್ಯದಾಯಕವಾಗಿ ದಾನ ನೀಡಿದ ವಿವರವನ್ನು ಶಾಸನದಲ್ಲಿ ವಿವರಿಸುತ್ತದೆ.[10]

**ನಾಕೀಕೆರೆ (ಹಿರಿಯೂರು ತಾಲೂಕು)**

ಹಿರಿಯೂರು ತಾಲೂಕಿನ ಕ್ರಿ.ಶ 1726ರ ನಾಕೀಕೆರೆ ಶಿಲಾ ಶಾಸನದಲ್ಲಿ ಕಾಮಗೇತಿ ಕಸ್ತೂರಿ ಭರಮಣ್ಣನಾಯಕರ ಮಗ ಮದಕರಿನಾಯಕರು ನಾಕೀಕೆರೆ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ಆ ಗ್ರಾಮವನ್ನು ತಿರುಮಲೆ ಪೆನಗೊಂಡ ರಾಮಚಾರ್ಯರ ಮಗ ಶ್ರೀನಿವಾಸಚಾರ್ಯರಿಗೆ ದಾನ ಕೊಟ್ಟಿದ್ದನ್ನು ಈ ಶಾಸನ ದಾಖಲಿಸುತ್ತದೆ.[11]

**ಮಲ್ಲೇನಹಳ್ಳಿ (ದಾವಣಗೆರೆ ತಾಲೂಕು)**

ದಾವಣಗೆರೆ ತಾಲೂಕಿನ ಮಲ್ಲೇನಹಳ್ಳಿ ಶಿಲಾಶಾಸನದ ಪ್ರಕಾರ, ವಾಲ್ಮೀಕಿ ಗೋತ್ರದ ಮಹಾನಾಯಕಾಚಾರ್ಯ ಕಾಮಗೇತಿ ಭರಮಣ್ಣ ನಾಯಕನ ಪುತ್ರನಾದ ಮದಕರಿ ನಾಯಕನು, ಪೂತಿ ಮಾಷ ವಶಿಷ್ಠ ಗೋತ್ರ ಹಾಗೂ ಆಶ್ವಲಾಯನ ಸೂತ್ರಕ್ಕೆ ಸೇರಿದ ತಿರುಮಲ ಭಟ್ಟರ ಪುತ್ರನಾದ ಶಾಮಾಚಾರ್ಯರಿಗೆ ಕೊಡಗನೂರು ಸೀಮೆಯ ಮಲ್ಲೇನಹಳ್ಳಿ ಗ್ರಾಮವನ್ನು ಅಗ್ರಹಾರವಾಗಿ ನಿರ್ಮಿಸಿ ದಾನವಾಗಿ ನೀಡಿದ್ದಾನೆ. ಅಲ್ಲದೆ, ಆ ಅಗ್ರಹಾರಕ್ಕೆ 'ಮದಕರಿಪುರ' ಎಂದು ನಾಮಕರಣ ಮಾಡಿರುವುದನ್ನು ಶಾಸನವು ದಾಖಲಿಸಿದೆ. ಈ ಶಾಸನವು ನಾಯಕ ಅರಸರ ಕಾಲದಲ್ಲಿ ಬ್ರಾಹ್ಮಣರಿಗೆ ಗ್ರಾಮಗಳನ್ನು ಅಗ್ರಹಾರವಾಗಿ ದಾನ ನೀಡಿ, ಅವುಗಳಿಗೆ ಹೊಸ ಹೆಸರುಗಳನ್ನು ನೀಡಿ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳಾಗಿ ಅಭಿವೃದ್ಧಿಪಡಿಸಿದ ಪರಿಪಾಠವನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ ಮಲ್ಲೇನಹಳ್ಳಿ ಶಿಲಾಶಾಸನವು ಚಿತ್ರದುರ್ಗ ನಾಯಕರ ಕಾಲದ ಅಗ್ರಹಾರ ವ್ಯವಸ್ಥೆಯನ್ನು ತಿಳಿಯಲು ಮಹತ್ವದ ಐತಿಹಾಸಿಕ ಆಕರವಾಗಿದೆ.[12]

**ಕಸವನಹಳ್ಳಿ (ಜಗಳೂರು ತಾಲೂಕು)**

ಜಗಳೂರು ತಾಲೂಕಿನ ಕ್ರಿ.ಶ 1733ರ ಕಸವನಹಳ್ಳಿ ಶಿಲಾಶಾಸನದಲ್ಲಿ ವಾಲ್ಮೀಕಿ ಗೋತ್ರದ ಶ್ರೀ ಮಹಾ ನಾಯಕಚಾರ್ಯ ಕಾಮಗೇತಿ ಭರಮಣ್ಣನಾಯಕನ ಮಗ ಮದಕರಿ ನಾಯಕರು ಸಿಂಜನಿ ಗೋತ್ರದ ಭಟ್ಟರ ಬಾಗೂರ ತಿಮ್ಮಪ್ಪನ ಪುತ್ರರಾದ ಪುಟ್ಟಯ್ಯರ ಮಕ್ಕಳಾದ ವಾರಿಜನಾಭೇಯ ಸೀನಯ್ಯ, ಭರಮಯ್ಯರಿಗೆ ಜಗಳೂರು ಸೀಮೆಯ ಕಸವನಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಬಿಟ್ಟುಕೊಟ್ಟ ದಾನವನ್ನು ದಾಖಲಿಸುತ್ತದೆ.[13] ಶಿಲಾಶಾಸನ ಜೊತೆಗೆ ನಾಯಕನಹಟ್ಟಿ ತಾಮ್ರ ಶಾಸನ[14] ಹಾಕಿಸಿರುವುದು ಇಲ್ಲಿನ ಅಗ್ರಹಾರ ಮಹತ್ವವನ್ನು ತೋರಿಸುತ್ತದೆ. ಚಿತ್ರದುರ್ಗದ ನಾಯಕರ ಅರಸರೇ ಅನೇಕ ಅಗ್ರಹಾರಗಳನ್ನು ನಿರ್ಮಿಸಿದ್ದಲ್ಲದೆ ದಾನದತ್ತಿಗಳನ್ನು ಕೊಟ್ಟಿರುವುದು ಶಾಸನಗಳಲ್ಲಿ ಉಲ್ಲೇಖಿಸಿರುವುದು ವಿಶೇಷ. ಅಗ್ರಹಾರಗಳು ನಿರ್ಮಿಸುವುದು ಪುಣ್ಯದ ಕೆಲಸವೆಂದು ಭಾವಿಸಿದ್ದಾರೆ.

**ಅಗ್ರಹಾರಗಳ ಪತನ**

ಕರ್ನಾಟಕದಲ್ಲಿ ಕ್ರಿ.ಶ.5ನೇ ಶತಮಾನದಿಂದ ಆರಂಭಗೊಂಡ ಅಗ್ರಹಾರಗಳು ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳ ಕಾಲಾವಧಿಯಲ್ಲಿ ಹೆಮ್ಮರವಾಗಿ ಬೆಳೆದುಕೊಂಡಿದ್ದ ಅಗ್ರಹಾರಗಳು ವಿಜಯನಗರ ಪತನಾನಂತರ ಪಾಳೆಯಗಾರರ ಕಾಲದ ವೇಳೆಗೆ ವೈಷ್ಣವ ಮತ ರಾಜಾಶ್ರಯ ಮತ್ತು ಜನತೆಯ ಬೆಂಬಲ ಕಳೆದುಕೊಂಡಿತು. ಏಕೆಂದರೆ 12ನೇ

ಶತಮಾನದಲ್ಲಿ ಹುಟ್ಟಿಕೊಂಡಿದ್ದ ಶರಣ ಚಳುವಳಿ ವಿಜಯನಗರ ಪತನಾನಂತರ ಸಾವಿರಾರು ವಿರಕ್ತರು ಪಾಳೆಯಗಾರರ ಆಶ್ರಯ ಪಡೆದುಕೊಂಡು ವೀರಶೈವ/ ಲಿಂಗಾಯತ ಮಠಗಳನ್ನು ಸ್ಥಾಪಿಸಿದರು. ಪಾಳೆಯಗಾರರ ರಾಜಗುರುಗಳಾಗಿ ವೀರಶೈವ ಮತವನ್ನು ರಾಜಧರ್ಮವನ್ನಾಗಿ ಮಾಡಿದ್ದಲ್ಲದೇ ಅನೇಕ ಪಾಳೆಯಗಾರರನ್ನು ವೀರಶೈವಮತಕ್ಕೆ ಸ್ಥಿತ್ಯಂತರಗೊಳಿಸಿದರು. ಅಗ್ರಹಾರಗಳಲ್ಲಿ ಕೇವಲ ಬ್ರಾಹ್ಮಣರಿಗೆ ಮಾತ್ರ ಶಿಕ್ಷಣ ನೀಡಲಾಗುತ್ತಿತ್ತು. ಆದರೆ ವೀರಶೈವ ಮಠಗಳು ನಾಡಿನ ಜನರಿಗೆ ಜಾತಿಭೇದವಿಲ್ಲದೇ ಎಲ್ಲ ಸಮುದಾಯದ ಜನರಿಗೆ ಅಕ್ಷರ ದಾಸೋಹ, ಅನ್ನದಾಸೋಹ, ಆಶ್ರಯದಾಸೋಹ ಎಂಬ ತ್ರಿವಿಧ ದಾಸೋಹ ನೀಡಿ ಜನಪರವಾದ ಸಾಮಾಜಿಕ ಕಾರ್ಯಕ್ರಮಗಳನ್ನು ನೀಡಿದವು. ಇದರಿಂದ ಪ್ರಭುತ್ವಗಳು ಮತ್ತು ಜನತೆ ಮಠಗಳಿಗೆ ಹತ್ತಿರವಾಗಿ ಅಗ್ರಹಾರಗಳಿಗೆ ನೀಡುತ್ತಿದ್ದ ದಾನದತ್ತಿ, ದೇಣಿಗೆಗಳನ್ನು ಮಠಗಳಿಗೆ ನೀಡುವುದರ ಮೂಲಕ ಅಗ್ರಹಾರಗಳನ್ನು ನಿರ್ಲಕ್ಷಿಸಿದರು. ಬ್ರಿಟಿಷ್ ವಸಾಹತು ಪ್ರಭುತ್ವ ಪಾಳೆಯಪಟ್ಟುಗಳನ್ನು ವಶಪಡಿಸಿಕೊಂಡಿದ್ದರಿಂದ ವೈದಿಕರ ಅಡಿಪಾಯ ಸಡಿಲಗೊಂಡಿತು. ಆದ್ದರಿಂದ ಬ್ರಾಹ್ಮಣರು ಸಹ ನಗರ ಪ್ರದೇಶಗಳಿಗೆ ವಲಸೆಗೊಂಡು ಹೊಸ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಮೂಲ ವೃತ್ತಿಯಿಂದ ಇತರೆ ವೃತ್ತಿಗಳಿಗೆ ಸ್ಥಿತ್ಯಂತರಗೊಂಡರು ಮತ್ತು ವಿದೇಶಗಳಿಗೆ ವಲಸೆ ಹೋಗಿದ್ದರಿಂದ ಅಗ್ರಹಾರಗಳು ಕ್ರಿ.ಶ. 19ನೇ ಶತಮಾನದ ವೇಳೆಗೆ ವೇಗವಾಗಿ ಕಣ್ಮರೆಯಾದವು.

**ಕೊನೆಟಿಪ್ಪಣಿಗಳು**


1. ಪ್ರಸನ್ನ ಕುಮಾರ್, ಎಂ. *ಮೈಸೂರು ಇತಿಹಾಸದಲ್ಲಿ ದಾನ.* ಪುಟ. 10–11
2. ಶ್ರೀನಿವಾಸ ಅಯ್ಯಂಗಾರ್, ಪಿ.ಟಿ. (1929) *ಆರಂಭ ಕಾಲದಿಂದ ಕ್ರಿ ಶ. 600 ವರೆಗಿನ ತಮಿಳರ ಇತಿಹಾಸ.* ಪುಟ–388
3. ರೈಸ್, ಬಿ.ಎಲ್ (ಸಂ.) ಎ.ಕ 11 ಚಿತ್ರದುರ್ಗ 84
4. ರೈಸ್, ಬಿ.ಎಲ್ (ಸಂ.) ಎ.ಕ 11 ಹಿರಿಯೂರು 58
5. ರೈಸ್, ಬಿ.ಎಲ್ (ಸಂ.) ಎ.ಕ 11 ಹಿರಿಯೂರು 57
6. ರೈಸ್, ಬಿ.ಎಲ್ (ಸಂ.) ಎ.ಕ 7 ಚನ್ನಗಿರಿ 20
7. ರೈಸ್, ಬಿ.ಎಲ್ (ಸಂ.) ಎ.ಕ 11 ದಾವಣಗೆರೆ 130
8. ರೈಸ್, ಬಿ.ಎಲ್ (ಸಂ.) ಎ.ಕ 11 ಜಗಳೂರು 17
9. ರೈಸ್, ಬಿ.ಎಲ್ (ಸಂ.) ಎ.ಕ 11 ಚಿತ್ರದುರ್ಗ 56
10. ರೈಸ್, ಬಿ.ಎಲ್ (ಸಂ.) ಎ.ಕ 11 ದಾವಣಗೆರೆ 16
11. ರೈಸ್, ಬಿ.ಎಲ್ (ಸಂ.) ಎ.ಕ 11 ಹಿರಿಯೂರು 74
12. ರೈಸ್, ಬಿ.ಎಲ್ (ಸಂ.) ಎ.ಕ 11 ದಾವಣಗೆರೆ 157
13. ರೈಸ್, ಬಿ.ಎಲ್ (ಸಂ.) ಎ.ಕ 11 ಜಗಳೂರು 46
14. ರಾಜಶೇಖರಪ್ಪ, ಬಿ. ದುರ್ಗಶೋಧ. ಪುಟ. 121